**O.S. 32-21** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 27.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ A V B, ವಕೀಲರಿಂದಃ**

2. ಶಕುಂತಲಾ ಮೆಮೋರಿಯಲ್ ಆಸ್ಪತ್ರೆ ಹಾಗೂ ರಿಸರ್ಚ ಸೆಂಟರ ಕಚೇರಿಯಿಂದ ನಮ್ಮ ತಂದೆಯವರು ನಿಡಿ.8 ನ್ನು ತಂದು ಹಾಜರಪಡಿಸಿದ್ದಾರೆ ಅಂದರೆ ಸರಿ. ನಿಡಿ.8 ಕ್ಕೂ ಹಾಗೂ ನಮ್ಮ ತಂದೆ ಕೊಟ್ಟಂತಹ ಪ್ರಮಾಣ ಪತ್ರಕ್ಕೂ ವ್ಯತ್ಯಾಸವಿದೆ ಅಂದರೆ ಸರಿಯಲ್ಲ. ನಿಡಿ.8 ರಲ್ಲಿ ಯಾವುದೇ ನಿರ್ದಾರವನ್ನು ಸ್ವತಂತ್ರವಾಗಿ ತೆಗೆದುಕೊಳ್ಳಲು ತೊಂದರೆಯಾಗುತ್ತದೆ ಹಾಗೂ ಕೇಸುಗಳನ್ನು ಓದಲು - ಸಹಿ ಮಾಡಲು, ಕಾಗದ ಪತ್ರ ನೋಡಲು, ನ್ಯಾಯಾಲಯದಲ್ಲಿ ಹಾಜರಪಡಿಸಿದ ದಾಖಲೆಗಳನ್ನು ನೋಡಲು ತೊಂದರೆಯಾಗುತ್ತದೆ ಅಂತಾ ಹೇಳಿರುತ್ತಾರೆ ಅಂದರೆ ಸರಿ. ಆ ಕಾರಣದಿಂದ ನಮ್ಮ ತಂದೆ ಜಿ ಪಿ ಎ ಬರೆದುಕೊಟ್ಟಿದ್ದಾರೆ ಅಂದರೆ ಸರಿ. ಯಾವ ಯಾವ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ ಮತ್ತು ಯಾವ ಕೋರ್ಟನಲ್ಲಿ ದಾಖಲೆ ಇವೆ ಗೊತ್ತಾಗುವುದಿಲ್ಲ ಅಂದರೆ ಸರಿ. 2013 ರಿಂದ ಬಿ ಪಿ ಇದೆ. ಆ ಕಾರಣದಿಂದ ಯಾವುದೇದಾಖಲೆಗಳನ್ನು ನಾನೇ ನೋಡಿಕೊಂಡು ಬಂದಿದ್ದೇನೆ. ನ್ಯಾಯಾಲಯಕ್ಕೆ ಪ್ರತಿಯೊಂದು ದಾಖಲೆಗಳನ್ನು ನಾನೇ ತಂದುಕೊಟ್ಟಿದ್ದೇನೆ. ಈ ರೀತಿ ನಮ್ಮ ತಂದೆ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ. ಕೇಸ ಹಾಕಿದಾಗ ಜಿ ಪಿ ಎ ಪಡೆಯಲು ತೊಂದರೆ ಇತ್ತು. ನಾನು ಆ ಕಾಲಕ್ಕೆ ವಿದ್ಯಾರ್ಥಿಯಾಗಿದ್ದೆನು. ಗ್ರಾಮದಲ್ಲಿ ಬಾಬು ಎಂಬ ಏಜೆಂಟನ ಮೂಲಕ ಕಾಗದ ಪತ್ರ ಪಡೆದಿದ್ದೇನೆ. ನಾನು ಏಜೆಂಟ ಮೂಲಕ ದಾಖಲೆ ಪಡೆದ ನಂತರ ಸಬ್ ರಜಿಸ್ಟ್ರಾರ್ ಹಾಗೂ ತಹಶೀಲ್ದಾರ ಕಚೇರಿಗೆ ಹೋಗಿ ವಿಚಾರಣೆ ಮಾಡಿದ್ದೇನೆ. ಕ್ಲರ್ಕ ಹೆಸರು ಗೊತ್ತಿಲ್ಲ. ಡ-ಉತಾರ, ಉತಾರ, ಇತ್ತೀಚಿನ ಮುಟೇಶನ್ ಪ್ರತಿಗಳು, ಮರಣ ಉತಾರಗಳು, ಇವುಗಳೆಲ್ಲವುಗಳನ್ನು ನೋಡಿದ್ದೇನೆ. ಇವುಗಳನ್ನು ಬಿಟ್ಟು ಬೇರೆ ದಾಖಲೆಗಳನ್ನು ನೋಡಿಲ್ಲ. ಈ ಮೇಲೆ ಹೇಳಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರಪಡಿಸಿರಬಹುದು. ನನಗೆ ಈಗ ಗೊತ್ತಿಲ್ಲ. ಈ ದಿನ ನಾನು ಕಾಗದ ಪತ್ರ ನೋಡಿಕೊಂಡು ಬಂದಿಲ್ಲ. ಕಾಗದಗಳ ಬಗ್ಗೆ ಈಗ ನೆನಪಿಲ್ಲ.

**O.S. 32-21** **DW-1**

3. ನಮ್ಮ ಅಜ್ಜನ ಹೆಸರು ಕೃಷ್ಣೇಗೌಡ. ಇವರು 1991 ರಲ್ಲಿ ಮರಣಹೊಂದಿದ್ದಾರೆ. ನಮ್ಮ ಅಜ್ಜಿ ಇಂದ್ರವ್ವ. ಇವರು 2006 ರಲ್ಲಿ ಮರಣ ಹೊಂದಿದ್ದಾರೆ. ಕೃಷ್ಣೇಗೌಡ ರವರಿಗೆ ಒಟ್ಟು 6 ಜನ ಮಕ್ಕಳಿದ್ದು, ನಮ್ಮ ತಂದೆ ರಾಮನಗೌಡ, ಬಸನಗೌಡ, ಕುಸುಮಾ ಅಶೋಕ ನಾಗರೆಡ್ಡಿ ನಿರ್ಮಲಾ, ಸರಸ್ವತಿ. ನಮ್ಮ ಅಜ್ಜನಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದು ಗೊತ್ತಿಲ್ಲ ಅಂದರೆ ನೆನಪು ಹಾರಿರುತ್ತೇನೆ. ನಮ್ಮ ತಂದೆಗೆ ನಾನೊಬ್ಬನೇ ಮಗ. ಬಸನಗೌಡ ಮದುವೆಯಾಗದೆ ಮರಣ ಹೊಂದಿದ್ದಾನೆ ಅಂದರೆ ಸರಿ. ಬಸನಗೌಡ ಮರಣ ಹೊಂದಿದಾಗ ನಮ್ಮ ಅಜ್ಜ ಜೀವಂತವಿದ್ದನು. ಈಗ ಉಳಿದವರು 4 ಜನ 1) ವಾದಿ ಮತ್ತು ಪ್ರತಿವಾದಿ 1 ರಿಂದ 3 ಇರುತ್ತಾರೆ. ವಾದ ಪತ್ರದ ಜೊತೆಗೆ ಇರುವ ವಂಶವೃಕ್ಷ ಸರಿಯಾಗಿದೆ. ಎಲ್ಲರೂ ಕೂಡಿ ಇದ್ದರು ಅಂದರೆ ಸರಿ. ಸದರಿ ಆಸ್ತಿಗಳು ವಿಭಾಗವಾಗಿಲ್ಲ. ನಮ್ಮ ತಂದೆ ಹೆಸರಿನಲ್ಲಿವೆ. ನಮ್ಮ ತಂದೆಗೆ ನಮ್ಮ ಅಜ್ಜ ಮರಣ ಹೊಂದಿದ ನಂತರ ಆಸ್ತಿಗಳು ಬಂದಿವೆ ಅಂದರೆ ಸರಿ. ವಾದಿ 2020-21 ರಲ್ಲಿ ನಮ್ಮ ಮನೆಗೆ ಬಂದಿದ್ದಳು ಅಂದರೆ ಸರಿ. ವಾದಿ ನಮ್ಮ ತಂದೆಗೆ ತನ್ನ ಪಾಲಿನ ಶೇ. 1/4 ಪಾಲು ಕೊಡುವಂತೆ ಕೇಳಿದಳು ಅಂದರೆ ಸರಿಯಲ್ಲ. ಆಗ ನಮ್ಮ ತಂದೆ ನಾನು ಆಸ್ತಿಯಲ್ಲಿ ಪಾಲು ಕೊಡುವುದಿಲ್ಲ ಅಂತಾ ಹೇಳಿದನು ಅಂದರೆ ಸರಿಯಲ್ಲ. ವಾದಿ ಕಾನೂನು ಪ್ರಕಾರ ಹಕ್ಕು ಇದೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಅಜ್ಜನ ಆಸ್ತಿ ಅಂದರೆ ಸರಿ. ನಮ್ಮ ತಂದೆ ಸ್ವಂತ ದುಡಿದು ಗಳಿಸಿಲ್ಲ ಅಂದರೆ ಸರಿ. ದಾವಾ ಆಸ್ತಿಗಳು ಸರಿಯಾಗಿವೆ. ಒಂದು ಆಸ್ತಿ ರಾಷ್ಟ್ರೀಯ ಹೆದ್ದಾರಿಗೆ ಸ್ವಾಧೀನವಾಗಿದೆ ಅಂದರೆ ಸರಿ. ಪರಿಹಾರ ಎಷ್ಟು ಬಂದಿದೆ ಅಂತಾ ನೆನಪಿಲ್ಲ. ನಾನು ಬ್ಯಾಂಕ ಪಾಸಪುಸ್ತಕ ಹಾಗೂ ಸ್ಟೇಟಮೆಂಟ ಹಾಜರಪಡಿಸುತ್ತೇನೆ. ಇನ್ನು 15 ಲಕ್ಷ ರೂ. ಪರಿಹಾರ ಬರುವುದು ಬಾಕಿ ಇದೆ. ಈ ದಾವೆ ಸಲ್ಲಿಸಿದ ನಂತರ ಪರಿಹಾರ ಕೊಡುವುದನ್ನು ನಿಲ್ಲಿಸಿದ್ದಾರೆ. ಶೆಡ್ಯೂಲ್ - ಬಿ ಆಸ್ತಿಯನ್ನು ವಾದಿಗೆ ಗೊತ್ತಿಲ್ಲದ ಹಾಗೆ 24 ಜನರಿಗೆ ಮಾರಾಟ ಮಾಡಿದ್ದೇವೆ ಅಂದರೆ ಸರಿ. ಒಬ್ಬೊಬ್ಬರ ಕಡೆಯಿಂದ 25 – 30 ಲಕ್ಷ ರೂ. ಪಡೆದಿದ್ದೇವೆ ಅಂದರೆ ಸರಿಯಲ್ಲ. ಒಂದು ಗುಂಟೆಗೆ ನಮ್ಮೂರಲ್ಲಿ 10 ಸಾವಿರ ರೂ, ಇದೆ. ನಾನು ಖರೀದಿ ಪತ್ರಗಳನ್ನು ನೋಡಿಲ್ಲ. ಖರೀದಿದಾರರಿಂದ ಬ್ಯಾಂಕ ಖಾತೆಗೆ ಹಣ ಜಮೆಯಾಗಿದೆ. ದಾಖಲೆ ಹಾಜರಪಡಿಸುತ್ತೇನೆ. ಕೆಲವು ಜನ ನಗದಾಗಿ ಕೊಟ್ಟಿದ್ದಾರೆ ಅಂದರೆ ಸರಿ. ಮಾರುಕಟ್ಟೆ ಬೆಲೆ ಉಪ-ನೋಂದಣಿ ಕಚೇರಿಯಲ್ಲಿ ಬರೆಯುತ್ತಾರೆ ಅಂದರೆ ಸರಿ. ಉಳಿದ ಹಣ ನಗದಾಗಿ ಕೊಡುತ್ತಾರೆ ಅಂದರೆ ಸರಿಯಲ್ಲ.

**O.S. 32-21** **DW-1**

ನಾವು ಒಂದು ಗುಂಟೆಗೆ 25 ಲಕ್ಷ ರೂ. ಹಾಗೂ 1300 ಚದರ ಅಡಿಗೆ 30 ಲಕ್ಷ ರೂ. ಗಳಂತೆ ಮಾರಾಟ ಮಾರಾಟ ಮಾಡಿದ್ದೇವೆ ಅಂದರೆ ಸರಿಯಲ್ಲ. ನಲವಡಿ ಯಲ್ಲಿ ಕೆ ವಿ ಜಿ ಬ್ಯಾಂಕ ಇದೆ ಅಂದರೆ ಸರಿ. ಅದಕ್ಕೆ ಪರಿಹಾರದ ಹಣ ಬಂದಿದೆ ಅಂದರೆ ಸರಿ. 63 ಲಕ್ಷ ರೂ. ಪರಿಹಾರದ ಹಣ ಬಂದಿದೆ ಅಂದರೆ ಸರಿಯಲ್ಲ. 20 ಲಕ್ಷ ರೂ. ಪರಿಹಾರದ ಹಣ ಬಂದಿದೆ ಅಂದರೆ ಸರಿಯಲ್ಲ. ಇದರ ಬಗ್ಗೆ ಬ್ಯಾಂಕಿನಲ್ಲಿ ದಾಖಲೆ ಇದೆ ಅಂದರೆ ಸರಿ. ಪರಿಹಾರ ಹಣದ ದಾಖಲೆ ಹಾಜರಪಡಿಸುತ್ತೇನೆ. ಪರಿಹಾರದ ಹಣದಲ್ಲಿ ವಾದಿಗೆ ಹಾಗೂ ಪ್ರತಿವಾದಿ -2 ಹಾಗೂ 3 ರವರಿಗೆ ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ವಾದಿ ಮನೆ ಹಿರಿತನ ಮಾಡುತ್ತಿದ್ದರು, ಆ ಕಾರಣದಿಂದ ಕೊಟ್ಟಿದ್ದೇವೆ. ವಾದಿ ಮನೆ ಹಿರಿತನ ಮಾಡುವ ಬಗ್ಗೆ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ. ಪ್ರತಿವಾದ ಪತ್ರ ನಿಜವಿದೆ. ನಾನು ಹೇಳುವುದು ಸುಳ್ಳು. ಏಕೆಂದರೆ, ಪ್ರತಿವಾದ ಪತ್ರದಲ್ಲಿ ಆ ವಿಷಯವನ್ನು ಮರೆತಿರುತ್ತಾರೆ. ಅದನ್ನು ಈಗ ಹೇಳುತ್ತಿದ್ದೇನೆ. ನಾನು ಎಲ್ಲಾ ವಿಷಯ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಹೇಳಿದರೆ ಜೈಲಿಗೆ ಹೋಗಬೇಕಾಗುತ್ತದೆ ಅಂದರೆ ಸರಿ. ನಾನು ಹೇಳಿದ್ದು ಸುಳ್ಳು ಎಂದು ಹೇಳಿದ್ದೇನೆ ಅಂದರೆ ಸರಿ. ವಾದಿ ಹಾಗೂ ಪ್ರತಿವಾದಿ 1 ರಿಂದ 3 ರವರು ಕೃಷ್ಣೇಗೌಡ ರವರ ಮಕ್ಕಳು ಅಂದರೆ ಸರಿ. ದಾವಾ ಆಸ್ತಿಗಳು ಕೃಷ್ಣೇಗೌಡ ರವರಿಗೆ ಅವರ ತಂದೆಯಿಂದ ಬಂದಿವೆ ಅಂದರೆ ಸರಿ. ನಮ್ಮ ಅಜ್ಜ ಮರಣ ಹೊಂದಿದ ನಂತರ ನಮ್ಮ ತಂದೆ ದಾಖಲೆಗಳಲ್ಲಿ ತನ್ನ ಹೆಸರು ನಮೂದು ಮಾಡಿಕೊಂಡು ಬಂದಿದ್ದಾನೆ ಅಂದರೆ ಸರಿಯಲ್ಲ. ವಾರಸಾ ಪ್ರಕಾರ ದಾಖಲೆಯಲ್ಲಿ ನಮೂದಾಗಿದೆ. ವಾರಸಾದಲ್ಲಿ 4 ಜನ ಇದ್ದಾರೆ ಅಂದರೆ ಸರಿ. 4 ಜನ ವಾರಸುದಾರರು ಎಂದು ವಾರಸಾ ಪ್ರಮಾಣ ಪತ್ರ ಹಾಜರಪಡಿಸಿದ್ದೇನೆ. ನಾನು ವಾರಸಾ ಪ್ರಮಾಣ ಪತ್ರ ಹಾಜರಪಡಿಸಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾರಸಾ ಪ್ರಕಾರ ಉತಾರದಲ್ಲಿ ನಮೂದಾಗಿಲ್ಲ. ನಮ್ಮ ತಂದೆ ಮೋಸ ಮಾಡುವ ಉದ್ದೇಶದಿಂದ 3 ಜನ ಬಿಟ್ಟು ತನ್ನ ಹೆಸರನ್ನು ಮಾತ್ರ ನಮೂದು ಮಾಡಿಕೊಂಡಿದ್ದಾನೆ ಅಂದರೆ ಸರಿಯಲ್ಲ. ನಾನು ದಾಖಲೆ ನೋಡಿದ್ದೇನೆ. ದಾಖಲೆಗಳಲ್ಲಿ ಯಾವುದು ನೋಂದಣಿ ದಾಖಲೆ ಇಲ್ಲ ಅಂದರೆ ಸರಿ. ಯಾವುದೇ ದಾಖಲೆ ಜಾರಿಯಾಗಿಲ್ಲ ಅಂದರೆ ಸರಿಯಲ್ಲ. ಸಾಲ ತೆಗೆದುಕೊಳ್ಳಲು ನಮ್ಮ ತಂದೆ ಅವರ ಸಹಿ ತೆಗೆದುಕೊಂಡಿದ್ದಾನೆ ಅಂದರೆ ಸರಿಯಲ್ಲ.

**O.S. 32-21** **DW-1**

ಮೋಸದಿಂದ ನಮ್ಮ ತಂದೆ ತನ್ನ ಹೆಸರನ್ನು ಮಾತ್ರ ನಮೂದು ಮಾಡಿಕೊಂಡು ವಾದಿ ಹಾಗೂ ಪ್ರತಿವಾದಿ 2 ಹಾಗೂ 3 ರವರ ಹೆಸರನ್ನು ಬಿಟ್ಟಿದ್ದಾನೆ ಅಂದರೆ ಸರಿಯಲ್ಲ. 1991 ಮೇ ತಿಂಗಳಲ್ಲಿ ನಮ್ಮ ತಂದೆ ಹೆಸರು ನಮೂದಾಗಿದೆ. ಉಳಿದ ಮೂವರು ಮೇ-1991 ರಲ್ಲಿ ಹಕ್ಕನ್ನು ಬಿಟ್ಟುಕೊಟ್ಟಿದ್ದಾರೆ. ಯಾವುದೇ ಹಕ್ಕನ್ನು ಬಿಟ್ಟುಕೊಟ್ಟಿಲ್ಲ ಅಂದರೆ ಸರಿಯಲ್ಲ. ನಮ್ಮ ಅಜ್ಜ ದಿಃ 9.4.1991 ರಂದು ಮರಣ ಹೊಂದಿದ್ದಾನೆ ಅಂದರೆ ಸರಿ. ಕಾರಣ ಮುಗಿಯಲು 2-3 ತಿಂಗಳ ಬೇಕಾಗುತ್ತದೆ ಅಂದರೆ ಸರಿಯಲ್ಲ. ನಮ್ಮ ಅಜ್ಜನ ಮರಣ ಉತಾರ 2011-12 ರಲ್ಲಿ ಸಿಕ್ಕಿದೆ. ಮರಣ ಉತಾರವಿಲ್ಲದೆ ಮುಟೇಶನ್ ಆಗುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ಹೆಸರಲ್ಲಿ ಉತಾರಗಳಿವೆ ಅಂದರೆ ಸರಿ. ನಮ್ಮ ಅಜ್ಜನ ಮರಣ ದಾಖಲೆ ಸಿಗುವ ಪೂರ್ವದಲ್ಲಿ ಮಾಡಿಕೊಂಡ ದಾಖಲೆಗಳು ವಾದಿಗೆ ಬಂಧನಕಾರಿಯಾಗುವುದಿಲ್ಲ ಅಂದರೆ ಸರಿಯಲ್ಲ. 1991 ರಲ್ಲಿ ವಾದಿ ಯಾವುದೇ ಹಕ್ಕು ಬಿಟ್ಟುಕೊಟ್ಟ ಪತ್ರ ಮಾಡಿಲ್ಲ ಅಂದರೆ ಸರಿಯಲ್ಲ. ವಾದಿ 6 ನೇ ತರಗತಿ ವರೆಗೆ ವ್ಯಾಸಂಗ ಮಾಡಿದ್ದಾಳೆ. 6 ನೇ ತರಗತಿ ಕಲಿತವರಿಗೆ ಕಾನೂನು ಜ್ಞಾನ ಇರುವುದಿಲ್ಲ ಅಂದರೆ ಸರಿಯಲ್ಲ. ವಾದಿ ನಮ್ಮ ತಂದೆ ಮೇಲೆ ಪ್ರೀತಿ ಇದ್ದಳು ಅಂದರೆ ಸರಿ. ಅನ್ಯೋನ್ಯವಾಗಿದ್ದರು ಅಂದರೆ ಸರಿ. ಏನು ಕೇಳಿದರು ವಾದಿ ಇಲ್ಲವೆಂದು ಹೇಳುತ್ತಿರಲಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ 2 ಹಾಗೂ 3 ಇದ್ದರು ಅಂದರೆ ಸರಿ. ಬ್ಯಾಂಕ ಸಾಲ ಮಾಡಲು ಎಲ್ಲರೂ ಸಹಿ ಬೇಕಾಗುತ್ತದೆ ಎಂದು ನಮ್ಮ ತಂದೆ ಹೇಳಿದ್ದರು ಅಂದರೆ ಸರಿಯಲ್ಲ. ನನ್ನ ಜನ್ಮದಿನಾಂಕಃ 6.9.1994. ನಾನು ಜನಿಸುವದಕ್ಕಿಂತ ಮುಂಚೆ ಏನು ನಡೆದಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ಹೊಟ್ಟೆಯಲ್ಲಿ ಹುಟ್ಟುವ ಬಗ್ಗೆ ಗೊತ್ತಿಲ್ಲ. ಹುಟ್ಟುವ ಮುಂಚೆ ಗೊತ್ತಿಲ್ಲ. ನಾನು ಹುಟ್ಟುವ ಪೂರ್ವದಲ್ಲಿ ರಾಮನಗೌಡ ಮನೆಯಲ್ಲಿ ಎಷ್ಟು ಜನ ಇದ್ದರೆಂದು ಗೊತ್ತಿಲ್ಲ ಅಂದರೆ ಸರಿಯಲ್ಲ. ಹುಟ್ಟಿದ ನಂತರ ದಾಖಲೆ ನೋಡಿ ಗೊತ್ತಾಗಿದೆ. ದಾಖಲೆ ನೋಡಬೇಕಾದರೆ ತಿಳವಳಿಕೆ ಬೇಕು ಅಂದರೆ ಸರಿ. ತಿಳವಳಿಕೆ ಪೂರ್ವದಲ್ಲಿ ಏನೂ ಆಗಿದೆ ಎಂದು ಗೊತ್ತಿಲ್ಲ. ನಮ್ಮ ತಂದೆ, ವಾದಿ ಹಾಗೂ ಪ್ರತಿವಾದಿ 2 ಹಾಗೂ 3 ರವರಿಗೆ ಮೋಸ ಮಾಡಿದ್ದನು, ಆ ವಿಷಯ ನನಗೆ ಹೇಳಿಲ್ಲ ಅಂದರೆ ಸರಿಯಲ್ಲ. ಮುಟೇಶನ್ ಗಳು ಮೋಸ ಮಾಡಿ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ವಾದಿಗೆ ಬಂಧನಕಾರಿಯಾಗುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆಗೆ 12 ವರ್ಷಗಳಿಂದ ಆರೋಗ್ಯ ಚೆನ್ನಾಗಿಲ್ಲ. 2013 ರಿಂದ ನಮ್ಮ ತಂದೆಗೆ ಆರೋಗ್ಯ ಚೆನ್ನಾಗಿಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2013 ರಿಂದ ನಮ್ಮ ತಂದೆ ಹೊರಗೆಡೆಗೆ ಹೋಗುವುದಿಲ್ಲ.

**O.S. 32-21** **DW-1**

ನಮ್ಮ ತಂದೆ ಆರೋಗ್ಯದ ಬಗ್ಗೆ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಹಾಜರಪಡಿಸಿದ ದಾಖಲೆಗಳ ಬಗ್ಗೆ ನಮ್ಮ ತಂದೆಗೆ ಏನು ಗೊತ್ತಿಲ್ಲ ಅಂದರೆ ಸರಿಯಲ್ಲ. ಸಧ್ಯದ ಮಟ್ಟಿಗೆ ನಮ್ಮ ತಂದೆ ಆರೋಗ್ಯ ಚೆನ್ನಾಗಿಲ್ಲ. ಮೋಸ ಮಾಡಿದ್ದು ಹೊರಗೆಡೆಗೆ ಬರುತ್ತದೆ ಅಂತಾ ನಮ್ಮ ತಂದೆ ನನಗೆ ಜಿ ಪಿ ಎ ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಮ್ಮ ತಂದೆ ಒಂದು ವರ್ಷದಿಂದ ಮನೆಯಿಂದ ಹೊರಗೆಡೆಗೆ ಬಂದಿಲ್ಲ. ನವಲಗುಂದ ಕೋರ್ಟಿಗೆ ಬಂದು ನಮ್ಮ ತಂದೆ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದಾನೆ. ನವಲಗುಂದ ಕೋರ್ಟಿಗ ನಮ್ಮ ತಂದೆ ಇತ್ತೀಚೆಗೆ ಹೋಗಿದ್ದನು. ಬೇಕಂತಲೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಒಂದು ತಿಂಗಳ ಹಿಂದೆ ನಮ್ಮ ತಂದೆ ನವಲಗುಂದಕ್ಕೆ ಹೋಗಿದ್ದರು. ನವಲಗುಂದ ಕೋರ್ಟಗೆ ಬಸ್ ಇಳಿದು ಆಟೋದಲ್ಲಿ ಹೋಗಿದ್ದರು. ಯಾವ ದಿನಾಂಕ ಎಂದು ಗೊತ್ತಿಲ್ಲ. ಪ್ರಮಾಣ ಪತ್ರಕ್ಕೆ ನಮ್ಮ ತಂದೆ ಸಹಿ ಮಾಡಿದ್ದಾರೆ. ನಾನು ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದೇನೆ. ಈಗ ಸಾಕ್ಷಿಗೆ ಸಿ ಪಿ ಸಿ ಆದೇಶ 3 ನಿಯಮ 2 ಅರ್ಜಿ ತೋರಿಸಲಾಗಿ ಅದರಲ್ಲಿ ನನ್ನ ಸಹಿ ಇಲ್ಲ ಅಂದರೆ ಸರಿ. ಪ್ರಮಾಣ ಪತ್ರದಲ್ಲಿ ಹುಬ್ಬಳ್ಳಿ ಎಂದು ಬರೆಯಲಾಗಿದೆ ಅಂದರೆ ಸರಿ. ನಮ್ಮ ತಂದೆ ಅದರಲ್ಲಿ ಯೂ ಮೋಸ ಮಾಡಲು ಕರಗತ ಅಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆಗೆ ಯಾವುದೇ ಅಧಿಕಾರವಿಲ್ಲದ ಕಾರಣ ಪ್ರತಿವಾದಿ 4 – 18 ರವರಿಗೆ ಮಾರಾಟ ಮಾಡಲು ಹಕ್ಕು ಇಲ್ಲ ಅಂದರೆ ಸರಿಯಲ್ಲ. ಸದರಿ ಮಾರಾಟ ಮಾಡಿದ ಹಣವನ್ನು ಬೇರೆ ಖಾತೆಯಲ್ಲಿಟ್ಟಿದ್ದೇವೆ ಅಂದರೆ ಸರಿಯಲ್ಲ. ನಾವು ಮನೆ ಕಟ್ಟಿಸಿಲ್ಲ. ಈಗ ಯಾರು ಮನೆ ಕಟ್ಟಿಸಿದ್ದಾರೆ ಅವರ ಮಾಲಿಕರು ಅಂದರೆ ಸರಿ. ನಾವು ಬೇನಾಮಿಯಾಗಿ ಬೇರೆಯವರ ಹೆಸರಿನಲ್ಲಿ ಮನೆ ಕಟ್ಟಿಸಿದ್ದೇವೆ ಅಂದರೆ ಸರಿಯಲ್ಲ. ನಮ್ಮ ಮನೆ ಬಗ್ಗೆ ಊರಲ್ಲಿ ಪಂಚಾಯತಿ ಆಗಿಲ್ಲ. ಸದರಿ ಮನೆಯಲ್ಲಿಯೂ ವಾದಿಗೆ ಹಕ್ಕು ಇದೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ ಕಾನೂನು ಬದ್ಧ ಹಕ್ಕು ಇದೆ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿ 1/4 ರಷ್ಟು ಹಕ್ಕುವುಳ್ಳವಳು ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.